ಶ್ರೀ ಜೆ. ಎಸ್. ದೇಶ್‌ಮುಖ್.—ಈ ಯೋಜನೆಯಲ್ಲಿ ಐದು ವರ್ಷಗಳ ಕಾಲದಲ್ಲಿ ೬೦ ಕೋಟಿ ಸಸಿಗಳನ್ನು ಬೆಳೆಸಿ ರೈತರಿಗೆ ಹಂಚಲು ಯೋಜನೆ ಹಾಕಿಕೊಳ್ಳಲಾಗಿದೆ. ಅದರ ಪ್ರಕಾರ ೧೯೮೪–೮೫ ರಲ್ಲಿ ೧.೨೫ ಕೋಟಿ ಸಸಿಗಳನ್ನು ಬೆಳೆಸಲಾಗಿದೆ. ೧೯೮೫–೮೬ ರಲ್ಲಿ ೪.೨೫ ಕೋಟಿ ಸಸಿಗಳನ್ನು ಕಿಸಾನ್ ನರ್ಸರಿಯಲ್ಲಿ ಬೆಳೆಸುತ್ತಿದ್ದೇವೆ. ಯಾರಾದರೂ ರೈತರು ಮುಂದೆ ಬಂದರೆ ಅವರಿಗೆ ೨೬ ಲಕ್ಷ ಸಸಿಗಳನ್ನು ಬೆಳೆಸುವುದಕ್ಕೆ ಅನುಮತಿ ಕೊಡುತ್ತೇವೆ. ಹಾಗೂ ಅವರು ಬೆಳೆಸಿದ ಸಸಿಗಳನ್ನು ಒಂದು ಸಸಿಗೆ ೩೫ ರಿಂದ ೪೦ ಪೈಸೆಯಂತೆ ನಮ್ಮ ಇಲಾಖೆಯಿಂದ ಪರ್ಚೇಸ್ ಮಾಡುತ್ತೇವೆ.

- ಶ್ರೀ ಜ್ಞಾನದೇವ ದೊಡ್ಡಮೇಟಿ.—ರೈತರು ಬೆಳೆಸಿದ ಸಸಿಗಳನ್ನು ಅರಣ್ಯ ಇಲಾಖೆಯವರು ಕೊಂಡುಕೊಳ್ಳುತ್ತಾರೆಯೇ ? ಇದರಿಂದ ರೈತರಿಗೆ ಏನು ಲಾಭ ಇದೆ. ?

ಶ್ರೀ ಜೆ. ಎಸ್. ದೇಶ್‌ಮುಖ್.—ರೈತರಿಗೆ ಬೀಜಗಳನ್ನು ಕಿಸಾನ್ ನರ್ಸರಿಯಲ್ಲಿ ಬೆಳೆಸಲು ಪುಕ್ಕಟೆಯಾಗಿ ಕೊಡುತ್ತೇವೆ. ನಂತರ ಅವರು ಬೆಳೆಸಿದ ಸಸಿಗಳನ್ನು ೩೫–೪೦ ಪೈಸೆ ಕೊಟ್ಟು ಖರೀದಿ ಮಾಡುತ್ತೇವೆ. ಪುನಃ ಇದನ್ನು ಬೆಳೆಸಲು ರೈತರಿಗೆ ಪುಕ್ಕಟೆಯಾಗಿ ಹಂಚುತ್ತೇವೆ.

ಅಧ್ಯಕ್ಷರು—ಮಾನ್ಯ ಕೆ. ಕುಶಾಲ ಇವರ ಪ್ರಶ್ನೆ ಸಂಖ್ಯೆ ೬೪(೪೫೩)ನ್ನು (೧) ಗ್ರೂಪ್‌ಗೆ ವರ್ಗಾಯಿಸಲಾಗಿದೆ.

ಚುಕ್ಕೆ ಪ್ರಶ್ನೆ ೬೫(೪೯೬) ಶ್ರೀ ವಸಂತ್ ಬಂಗೇರಾ(ಸದಸ್ಯರು ಗೈರು ಹಾಜರಿ)

ಶ್ರೀಮತಿ ಮುಮ್ತಾಜುನ್ನಿಸಾ ಇವರ ಪ್ರಶ್ನೆ ಸಂಖ್ಯೆ ೬೬(೮೦)ನ್ನು ಮುಂದೂಡಲಾಗಿದೆ.
ಮುಂದಿನ ಪ್ರಶ್ನೆ ಶ್ರೀ ಕಾನಡೆಯವರು ಕೇಳಬಹುದು.

ಉಪ್ಪಾಗೆ ಸಿಪ್ಪೆ ಹಣ್ಣಿನ ಹರಾಜು

೬೭(೮೦) ಶ್ರೀ ಗೋಪಾಲ ಮುಕುಂದ ಕಾನಡೆ(ಸಿರ್ಸಿ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೫–೮೪ ರಿಂದ ಉಪ್ಪಾಗೆ ಸಿಪ್ಪೆ ಹಣ್ಣಿನ ಬಹಿರಂಗ ಹರಾಜು ಕರೆದಿದ್ದು ೧೯೮೫–೮೬ ಹಾಗೂ ೧೯೮೬–೮೭ರಲ್ಲಿ ಈ ಬಗ್ಗೆ ಬಹಿರಂಗ ಹರಾಜನ್ನು ಸಿರ್ಸಿ ಸಿದ್ದಾಪುರ ವಲಯದಲ್ಲಿ ಕರೆಯದೇ ಇರಲು ಕಾರಣವೇನು ?

ಆ) ಸರ್ಕಾರದಿಂದ ಬಹಿರಂಗ ಹರಾಜು ಕರೆಯಲು ಆದೇಶವಿದ್ದರೂ, ಸಿರ್ಸಿಯ ಅರಣ್ಯ ಸಂರಕ್ಷಣಾಧಿಕಾರಿಗಳು ಸರ್ಕಾರಿ ಆಜ್ಞೆಯನ್ನು ಉಲ್ಲಂಘಿಸುವುದು ನಿಜವೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜೆ.ಎಸ್. ದೇಶ್‌ಮುಖ್(ಅರಣ್ಯ ಮಂತ್ರಿಗಳು).—

ಅ) ಬಹಿರಂಗ ಹರಾಜಿನಲ್ಲಿ ಗುತ್ತಿಗೆ ಪಡೆದ ಹಿಂದಿನ ಗುತ್ತಿಗೆದಾರರುಗಳು ಉಪ್ಪಾಗೆ ಮರಗಳನ್ನು ವಿವೇಚನಾ ರಹಿತವಾಗಿ ಕಡಿದು ಮರಗಳಿಗೆ ಜಖಂ ಮಾಡಿದ್ದು ಮತ್ತು ಸದರಿ ಗುತ್ತಿಗೆದಾರರ ಮೇಲೆ ಅಪಾದನೆಗಳು ಬಂದಿರುವುದರಿಂದ ಬಹಿರಂಗ ಹರಾಜನ್ನು ಮಾಡಲಿಲ್ಲ.

ಆ) ೧೯೮೫–೮೬ ಮತ್ತು ೧೯೮೬–೮೭ರ ಸಾಲಿನ ಗುತ್ತಿಗೆಯನ್ನು ರೂ. ಒಂದು ಲಕ್ಷಕ್ಕೆ ತಗ್ಗು ಬೆಲೆಯಲ್ಲಿ ಕೃಷಿ ಮತ್ತು ಕ್ಷೀರ ಉತ್ಪಾದಕರ ವಿಪಥ್ವೋದ್ದೇಶದ ಸಹಕಾರಿ ಸಂಘ(ನಿಯಮಿತ) ಬಕ್ಕಳ್ ಅವರಿಗೆ ನೀಡಿರುವುದರಿಂದ ಉಲ್ಲಂಘನೆಯ ಪ್ರಶ್ನೆಯಿಲ್ಲ.

ಇ) ಮೇಲ್ಕಂಡ(ಆ)ಕ್ಕೆ ನೀಡಿದ ಉತ್ತರದಿಂದ ಈ ಸಮಸ್ಯೆ ಉದ್ಭವಿಸುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಉಪ್ಪಾಗೆ ಸಿಪ್ಪೆ ಹಣ್ಣು ಎಂದರೆ ನನ್ನ ಕಡೆ ಬೆಳೆಯುತ್ತದೆ. ಇದನ್ನು ೧೯೮೫–೮೬ನೇ ಇಸವಿಯಲ್ಲಿ ಒಂದು ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಹರಾಜು ಮಾಡಿದ್ದರು. ಹರಾಜು ಮಾರಾಟದಲ್ಲಿ ತೆಗೆದುಕೊಂಡವರು ಮರವನ್ನು ಕಡಿದು ಹಾಳು ಮಾಡಿದ್ದಾರೆ ಎಂದು ಹೇಳಿದ್ದಾರೆ. ಆ ರೀತಿ ಆದರೆ ಹರಾಜು ಬಂದ್ ಮಾಡಬೇಕು. ಯಾರಾದರೂ ಒಬ್ಬರ ಹೆಸರಿಗೆ ಹರಾಜು ಕೊಡಿರಿ ಎಂದು ನಾನು ಕೇಳುತ್ತಿಲ್ಲ. ನಮ್ಮ ಸರಕಾರ ಅರಣ್ಯ ಇಲಾಖೆ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದೆ. ಕೋಟ್ಯಾಂತರ ರೂಪಾಯಿಗಳ ಲಾಸ್ ಮಾಡಿದವರನ್ನು ಇವತ್ತು ರಕ್ಷಣೆ ಮಾಡುತ್ತಿದ್ದಾರೆ. ಈ ಹಣ್ಣಿನ ಹರಾಜಿನಿಂದ ಸರಕಾರಕ್ಕೆ ಎರಡೂವರೆ ಮೂರು ಲಕ್ಷ

ರೂಪಾಯಿ ಇನ್‌ಕಮ್ ಬರುತ್ತದೆ. ಇದನ್ನು ಕೇವಲ ಒಂದು ಲಕ್ಷ ರೂಪಾಯಿಗೆ ಜನತಾ ಪಕ್ಷದ ಒಬ್ಬ ಲೀಡರ್‌ಗೆ ಬಿಕ್ಕಲ್‌ನಲ್ಲಿ ಇರುವ ಸಹಕಾರಿ ಸಂಘಕ್ಕೆ ಕೊಟ್ಟು ಸರಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಇದನ್ನು ಹರಾಜಿಗೆ ಇಡಿ ಎಂದರೆ ಇಡುತ್ತಿಲ್ಲ. ಅದೊಂದೇ ಒಂದು ಸೊಸೈಟಿಗೆ ಇದನ್ನು ಕೊಡುತ್ತಿದ್ದಾರೆ. ಇದನ್ನು ಹರಾಜು ಮಾಡಬಾರದೆಂದು ಸರಕಾರದ ಆದೇಶ ಏನಾದರೂ ಇದೆಯೇ ಇಲ್ಲ ಅರಣ್ಯ ಇಲಾಖೆಯ ಅಧಿಕಾರಿಗಳು ಸೊಸೈಟಿಯವರ ಜೊತೆ ಷಾಮಿಲಾಗಿ ಈ ರೀತಿ ಮಾಡುತ್ತಿದ್ದಾರೆಯೆ ಇನ್ನು ಎರಡನೆಯದಾಗಿ, ಸಾಗರದಲ್ಲಿ ಉಪ್ಪಾಗೆ ಸಿಪ್ಪೆ ಹಣ್ಣಿಗೆ ಕ್ವಿಂಟಾಲಿಗೆ ೭೦೦ ರಿಂದ ೭೫೫ ರೂಪಾಯಿವರೆಗೆ ಬೆಲೆ ಇದೆ. ಹೊನ್ನಾವರದಲ್ಲಿಯೂ ೭೦೦ ರೂಪಾಯಿಗಳವರಿಗೆ ಬೆಲೆ ಇದೆ. ಸಿರಸಿದ್ದಾಪುರದಲ್ಲಿ ೪೨೦ ರಿಂದ ೪೫೫ ರೂಪಾಯಿಯವರೆಗೆ ಬೆಲೆ ಇದೆ. ಇಷ್ಟೊಂದು ಬೆಲೆ ಇರುವಾಗ ಟೆಂಡರನ್ನು ಕರೆಯದೇ ಒಬ್ಬರಿಗೆ ಗುತ್ತಿಗೆಯನ್ನು ಕೊಟ್ಟು ರೈತರಿಗೆ ಏಕೆ ಅನ್ಯಾಯವನ್ನು ಮಾಡುತ್ತಿದ್ದೀರಿ? ಇದಕ್ಕೆ ತಾವು ಉತ್ತರ ಕೊಡಿ.

ಶ್ರೀ ಜೆ. ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ವರ್ಷಗಳಿಂದ ಇದನ್ನು ಬಹಿರಂಗ ಹರಾಜನ್ನು ಮಾಡಿಲ್ಲ. ಆದರೂ ಉಪ್ಪಾಗೆ ಸಿಪ್ಪೆ ಹಣ್ಣಿನಿಂದ ಸರ್ಕಾರಕ್ಕೆ ಆದಾಯ ಬಂದಿದೆ. ೧೯೮೬-೮೭ರಲ್ಲಿ ಟೆಂಡರನ್ನು ಕರೆದಾಗ, ಯಾರೂ ಮುಂದೆ ಬರಲಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾನು ಗಣಪತಿ ಬಗ್ಗೆ ಕೇಳಿದರೆ, ನೀವು ಶಿವನ ಬಗ್ಗೆ ಹೇಳುತ್ತಿದ್ದೀರಿ. ಗುತ್ತಿಗೆ ಪಡೆದ ಹಿಂದಿನ ಗುತ್ತಿಗೆದಾರರುಗಳು ಅನ್ಯಾಯ ಮಾಡಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಂಡು, ಬೇರೆ ಹರಾಜು ಕರೆಯಬೇಕಾಗಿತ್ತು. ನೀವು ಹರಾಜನ್ನು ಏಕೆ ಕರೆಯಲಿಲ್ಲ? ಒಬ್ಬರಿಗೇ ಮೊದಲಿಂದಲೂ ಇದರ ಗುತ್ತಿಗೆಯನ್ನು ಏಕೆ ಕೊಡುತ್ತಿದ್ದೀರಿ? ನಿಮ್ಮ ಅಧಿಕಾರಿಗಳು ಲಂಚವನ್ನು ತೆಗೆದುಕೊಂಡು ಒಬ್ಬರಿಗೆ ಗುತ್ತಿಗೆಯನ್ನು ಕೊಟ್ಟಿರುವುದು ಸರಿಯೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಗುತ್ತಿಗೆಯನ್ನು ನಾವು ಸೊಸೈಟಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸೊಸೈಟಿ ಒಂದೆಯೇ ಇರುವುದು. ಹುಡುಗರಿಗೆ ಪಾಠ ಹೇಳುವ ಹಾಗೆಯೆಲ್ಲ ತಾವು ಹೇಳುವುದು. ಸರಿಯಾಗಿ ಉತ್ತರ ಹೇಳಿ ? ಸೊಸೈಟಿಗೆ ಇದರ ಗುತ್ತಿಗೆಯನ್ನು ಕೊಡುವುದು ಸರಿ. ಆದರೆ ಈ ಒಂದೇ ಸೊಸೈಟಿಯೇ ರಾಜ್ಯದಲ್ಲಿ ಇರುವುದು ?

ಅಧ್ಯಕ್ಷರು.—ಅವರು ಹೇಳುವುದನ್ನು ತಾವು ಸ್ವಲ್ಪ ಕೇಳಿ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಮಂತ್ರಿಯವರು ಉತ್ತರ ಹೇಳುವುದನ್ನು ಅವರು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾವು ಕೇಳುವುದು ಒಂದು ಅವರು ಹೇಳುವುದು ಒಂದಾದರೆ ಹೇಗೆ?

ಶ್ರೀ ಜೆ. ಎಸ್. ದೇಶ್‌ಮುಖ್.—ಇನ್ನು ಮುಂದೆ ಟೆಂಡರನ್ನು ಕರೆಯುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇಷ್ಟುವರೆಗೆ ನೀವು ಟೆಂಡರನ್ನು ಏಕೆ ಕರೆಯಲಿಲ್ಲ? ಅದಕ್ಕೆ ಉತ್ತರ ಹೇಳಿ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಅವರ ಪ್ರಶ್ನೆಯನ್ನು ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಅವರು ಕೇಳುವುದೇನೆಂದರೆ, ಟೆಂಡರುಗಳನ್ನು ಕರೆಯಬೇಕು ಓಪನ್ ಹರಾಜಿನಲ್ಲಿ ಬಿಡ್ ಮಾಡುವುದಕ್ಕೆ ಎಲ್ಲರಿಗೂ ಅವಕಾಶ ಇರಬೇಕು. ಅದು ಹಾಗಿಲ್ಲದೆ ಒಂದೇ ಸೊಸೈಟಿಗೆ ಗುತ್ತಿಗೆಯನ್ನು ಕೊಟ್ಟಿದ್ದಾರೆಂದು ಅವರು ಹೇಳುತ್ತಿದ್ದಾರೆ. ಇವರು ಮೊದಲು ಟೆಂಡರನ್ನು ಕರೆದಿದ್ದಾರೆಯೆ? ಹರಾಜು ಮಾಡಿದ್ದಾರೆಯೇ ಇಲ್ಲವೇ? ಸೊಸೈಟಿಗೆ ಕೊಟ್ಟಿದ್ದರೆ, ಬೇರೆ ಸೊಸೈಟಿಯವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿದ್ದರೇ ಎಂಬುದೇ ಅವರ ಪ್ರಶ್ನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಸೊಸೈಟಿಗಳಿಗೇ ಗುತ್ತಿಗೆಯನ್ನು ಕೊಡಬೇಕೆಂದು ಸರ್ಕಾರದ ಆದೇಶ ಇದೆ. ಆ ಆದೇಶದಂತೆ ಸೊಸೈಟಿಗೆ ಕೊಟ್ಟಿದ್ದೇವೆ. ಗುತ್ತಿಗೆಯನ್ನು ಕೊಡುವಾಗ ಬೇರೆ ಸೊಸೈಟಿನವರು ಭಾಗವಹಿಸಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸೊಸೈಟಿಗೆ ಗುತ್ತಿಗೆಯನ್ನು ಕೊಡಬೇಕೆಂದು ಸರ್ಕಾರದ ತೀರ್ಮಾನ ಇದೆ. ಆ ಪ್ರಶ್ನೆ ಬೇರೆ. ನೀವು ಬಹಿರಂಗ ಹರಾಜನ್ನು ಮಾಡಿದ್ದೀರಾ? ಬಹಿರಂಗ ಹರಾಜಿನಲ್ಲಿ

ಯಾವ ಯಾವ ಸೊಸೈಟಿಗಳು ಭಾಗವಹಿಸಿದ್ದವು. ಎಂಬ ಬಗ್ಗೆ ನಿಮ್ಮ ಹತ್ತಿರ ವಿವರಗಳು ಇದ್ದರೆ ಅದನ್ನು ಕೊಡಿ.

ಶ್ರೀ ಜೆ ಎಸ್. ದೇಶ್‌ಮುಖ್.—ವಿವರಗಳು ನನ್ನ ಹತ್ತಿರ ಇಲ್ಲ. ಅದನ್ನು ತರಿಸಿ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈ ಪ್ರಶ್ನೆಯನ್ನು ಮತ್ತೆ ಸೋಮವಾರ ತೆಗೆದುಕೊಳ್ಳಲಾಗುತ್ತದೆ. ಮಾನ್ಯ ಖಾರ್ಗೆಯವರೇ ಈಗ ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಆರ್. ಎನ್. ನಾಯಕ್.—ಯಾವ ಯಾವ ವಿಷಯದ ಮೇಲೆ ಉತ್ತರವನ್ನು ತರಿಸಬೇಕಂ ಎಂಬುದನ್ನು ಮಾನ್ಯ ಮಂತ್ರಿಯವರಿಗೆ ತಿಳಿಸಬೇಕು ಅಧ್ಯಕ್ಷರೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಈ ಪ್ರಶ್ನೆಯನ್ನು ಸೋಮವಾರ ತೆಗೆದುಕೊಳ್ಳಿ.

ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ತೀಕರಣ

೬೮ (೨೪೫) (ಡಿ) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ರಾಜ್ಯದಲ್ಲಿ ೧೯೮೫–೮೬ ಮತ್ತು ೧೯೮೬–೮೭ನೇ ಸಾಲಿನಲ್ಲಿ ವಿದ್ಯುತ್ ಒದಗಿಸಲಾದ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ? (ಜಿಲ್ಲಾವಾರು ಅಂಕಿ ನೀಡುವುದು)

(ಆ) ವಿಶೇಷ ಘಟಕ ಯೋಜನೆಯಡಿಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಮಾಡಿದ ಖರ್ಚಿಷ್ಟು?

(ಇ) ಗುರುಮಿಠಕಲ್ ಕ್ಷೇತ್ರದಲ್ಲಿ ವಿದ್ಯುತ್ ಒದಗಿಸಲಾದ ಒಟ್ಟು ನೀರಾವರಿ ಪಂಪುಸೆಟ್ಟುಗಳೆಷ್ಟು ಮತ್ತು ಅದಕ್ಕೆ ತಗುಲಿದ ವೆಚ್ಚವೆಷ್ಟು?

ಜೆ. ಹೆಚ್. ಪಟೇಲ್ (ವಿದ್ಯುತ್ ಮತ್ತು ಕೈಗಾರಿಕಾ ಸಚಿವರು).—

(ಅ) ಉತ್ತರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

(ಆ)

ವರ್ಷ	ಖರ್ಚು ಮಾಡಿದ ಒಟ್ಟು ಮೊತ್ತ
	(ರೂ. ಕೋಟಿಗಳಲ್ಲಿ)
೧೯೮೫–೮೬	೨೫.೮೮
೧೯೮೬–೮೭ (ನಾಲ್ಕು ತಿಂಗಳುಗಳಿಗೆ)	೧೩.೦೯

(ಇ)

ವರ್ಷ	ವಿದ್ಯುತ್ ಪಡೆದ ನೀರಾವರಿ ಪಂಪ್ ಸೆಟ್‌ಗಳ ಸಂಖ್ಯೆ :	ಖರ್ಚಾದ ಮೊತ್ತ ರೂ.
೧೯೮೫–೮೬	೩೮	೮,೬೮,೦೦೦
೧೯೮೬–೮೭ (ನಾಲ್ಕು ತಿಂಗಳುಗಳಿಗೆ)	೨೪	೫,೩೨,೦೦೦

ಪಂಪ್‌ಸೆಟ್‌ಗಳ ಒಟ್ಟು ಮೊತ್ತ : ೪೪೨